ಫಾರೆಸ್ಟ್ ಇಲಾಖಾ.

ಇಸ್ತಹಾರ್.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ಮರದ ಸಾರ್ವಜನಿಕ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳ್ಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಶಿವಮೊಗ್ಗ, 16ನೇ ಅಕ್ಟೋಬರ್ 1876.	}	ಹೆಚ್ಚು ಕಡಮೆ 200 ಟನ್‌ಗಳ ವಜನಿ.
ಸಾಗರ್, 25ನೇ „ „		
ಹುಣಸೂರು, 4ನೇ ನವಂಬರ್ 1876	}	ಹೆಚ್ಚು ಕಡಮೆ 560 ಟನ್‌ಗಳ ವಜನಿ.
ಶ್ರೀರಂಗಪಟ್ಣ, 8ನೇ „ „		
ಬೆಂಗಳೂರು, 1ನೇ ಡಿಶಂಬರ್ „		ಹೆಚ್ಚು ಕಡಮೆ 100 ಟನ್‌ಗಳು.
ಫೈಜರ್‌ಪೇಟೆ 18ನೇ „ „		„ 80 „

ಹರಾಜ್‌ನಿಬಂಧನೆ—ಹರಾಜ್‌ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್‌ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವಂಬರ್ 28ನೇ ಮಕ್ತುಂ 47ನೇ ನಂಬರು ಮೈಸೂರು ಗಜೆಟ್‌ನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳೆಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸ್‌ಪಾಸ್ ಕೋಠೀಗಳಲ್ಲಿ ಯ ಹರಾಜ್‌ಗಳು ನವಂಬರ್ 8ಕ್ಕೆ ಬೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ್ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಗೆ ಡಿಪಾಜಿಟ್ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮಕ್ತುಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತ್ತದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರವರಿ 6ನೇ ಮಕ್ತುಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತು ಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದ ಹಾಗೆ, ಖಂಡಿ, ಮಣ, ಶೇರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಬ್ಲಾಕ್ಸ್, ಪ್ಲಾಂಡ್, ಹಂಡ್ರೆಡ್ ಕ್ಯೂಬಿಕ್ ಟನ್‌ಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 11ನೇ ಅಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಫಾರೆಸ್ಟ್ ಯಿಲಾಖೆಗೆ ಸೇರಿದ ಜಂಗ್ಲೀಗಳು ಶಿವಾಯಿ) ಬೆಂಗಳೂರು ಡಿಸ್ಟ್ರಿಕ್ಟ್ ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟು 1877—78,—1878—79,—1879—80,—1880—81, ಮತ್ತು 1881—82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರಿಲ್ 1ನೇ ಮಕ್ತುಂ ಲಗಾಯತ್ 1882ನೇ ಮಾರ್ಚಿ 31ರ ವರಿಗೆ ತಾಲ್ಲೂಕು ವಾರಾಗಿ ಜಡ್ ದರಖಾಸ್ತು ಬಾರ್ಗೆ ಹರಾಜ್ ಮೂಲಕ 1877ನೇ ಮಾರ್ಚಿ 10ನೇ ಮಕ್ತುಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಆಫಿಸ್‌ನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಆಯಾ ವರುಷದ ಜಡ್ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರಾದ ಮೇಲೆ, ಕರ್ನಿಷೀಸೋಲ್ಟ್‌ಗಳು ಯಾ ನಗದುಹಣ. ಆರು ಖಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್‌ಮೆಂಟ್‌ಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲೀಯಾನಾ ದರಖಾಸ್ತು ಮೊಬಲಗ್ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ ಅಥ